C.R.P.67

| Form No.4 (Civil)<br>Deposition Sheets<br>(R.P.No.57) |
|---|

## ***1* ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

## ಎಸ್ ಸಿ ಸಂಖ್ಯೆ: **31/2015**

**ಪ್ರಾಸಾ. 16  ಚಾಸಾ. 18**

| | | |
|---|---|---|
| ಸಾಕ್ಷಿದಾರರ ಹೆಸರು | : | ನವೀನ್ ಕುಮಾರ್ ಎನ್. ಎಸ್ |
| ತಂದೆಯ ಹೆಸರು | : | ಲೇಟ್. ಶಿವಣ್ಣ |
| ವಯಸ್ಸು | : | 39 ವರ್ಷಗಳು |
| ಉದ್ಯೋಗ | : | ವ್ಯವಸಾಯ |
| ವಾಸ | : | ನೀಲಕಂಠನಹಳ್ಳಿ, ಮದ್ದೂರು. |

ಪ್ರಮಾಣ ವಚನ ಬೋಧಿಸಿದ ದಿನಾಂಕ: **26.02.2026**

ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು 2013-14 ರ ಸಾಲಿನಲ್ಲಿ ಖಾಸಗೀ ಹಣಕಾಸು ಸಂಸ್ಥೆಯಾದ ಗಣೇ ಎಂಟರ್ ಪ್ರೈಸಸ್ ನಲ್ಲಿ ಸಾಲ ಬಾಕಿ ಇದ್ದು ಕಂತುಗಳನ್ನು ಕಟ್ಟದೇ ಇರುವ ಸಾಲಗಾರರ ಸಾಲ ವಸೂಲಾತಿ ಹಾಗೂ ತತ್ಸಂಬಧದ ಅಂದರೆ ಸಾಲದ ಆಧಾರದ ಮೇಲೆ ಖರೀದಿಸಿದ ವಾಹನಗಳನ್ನು ಜಪ್ತಿ ಮಾಡುವ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೆ.

2. ನೋಂದಣಿ ಸಂಖ್ಯೆ ಕೆ ಎ 11 ಎ 5329 ಯುಳ್ಳ ಟಾಟಾ ಮ್ಯಾಜಿಕ್ ವಾಹನವನ್ನು ರವಿ ಎಂಬುವವರು ಚಲಿಸುತ್ತಿದ್ದರು. ಸದರಿ ವಾಹನದ ಮಾಲಿಕ ವಿಷಕಂಠ ಎಂಬುವವರು ಇದ್ದರು. ಸದರಿ ವಾಹನವು ರಾಜು ಎಂಬುವವರು ವರ್ಗಾವಣೆ ಪಡೆದಿರುವುದಾಗಿ ಹೇಳಿದ್ದರು.

3. ದಿನಾಂಕ 14.07.2014 ರಂದು ಸದರಿ ವಾಹನವನ್ನು ಕೆ ಎಮ್ ದೊಡ್ಡಿ ಕ್ರಾಸ್ ವೃತ್ತದ ಬಳಿ ಜಪ್ತಿ ಮಾಡಿ ಯಾರ್ಡಿಗೆ ಕಳುಹಿಸಿರುತ್ತೇವೆ. ಜಪ್ತು ಮಾಡಿದ ಸಮಯದಲ್ಲಿ ರವಿ ಎಂಬುವವರಿಗೆ ಜಪ್ತಿ ಕುರಿತಂತೆ ಹಿಂಬರಹ ನೀಡಿರುತ್ತೇವೆ. ಸದರಿ ವಾಹನವನ್ನು ಜಪ್ತಿ ಮಾಡಿದ ಒಂದು ತಿಂಗಳ ಬಳಿಕ ಪೋಲೀಸರು ನಾಲ್ಕು ಜನ ಆಸಾಮಿಗಳನ್ನು ಕರೆತಂದು ಜಪ್ತು ಮಾಡಿದ ವಾಹನ ಕುರಿತಂತೆ ವಿಚಾರಿಸಿದರು. ಆಗ ಸದರಿ ಜಪ್ತು ಮಾಡಿದ ವಾಹನವನ್ನು ಗುನ್ಹೆ ಆಪಾದನೆಯೊಂದರಲ್ಲಿ ಉಪಯೋಗಿಸಿಕೊಂಡಿರುವುದಾಗಿ ತಿಳಿದುಬಂತು. ಆ ಕಾಲಕ್ಕೆ ಅವರು ಕರೆತಂದ ಆಸಾಮಿಗಳ ಪೈಕಿ ರಾಜು ಎಂಬುವವನನ್ನು ನನಗೆ ತೋರಿಸಿರುತ್ತಾರೆ. ನಾನು ಸದರಿ ರಾಜುವನ್ನು ನೋಡಿದರೆ ಗುರುತಿಸಲಾರೆ.

**(**ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೋರಿದ್ದು**,** ಕೋರಿಕೆ ಸಮರ್ಪಕವಾಗಿದ್ದು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲಾಗಿದೆ**.)**

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

4. ನಾನು ಮುಖ್ಯ ವಿಚಾರಣೆಯಲ್ಲಿ ಉಲ್ಲೇಖಿಸಿದ ರಾಜುವನ್ನು ನೋಡಿದರೆ ಗುರುತಿಸಲಾರೆ ಕಾರಣ ಈಗಾಗಲೇ ಸಾಕಷ್ಟು ದಿನಗಳಾಗಿರುತ್ತವೆ.

<u>ಪಾಟೀ ಸವಾಲುಃ ಶ್ರೀ ಎ ಆರ್ (ಸಿಎಲ್ ಎಡಿಸಿ) ವಕೀಲರಿಂದ **2** ನೇ ಆರೋಪಿಯ ಪರವಾಗಿಃ</u>

5. ನಾನು ಮುಖ್ಯ ವಿಚಾರಣೆಯಲ್ಲಿ ಉಲ್ಲೇಖಿಸಿದ ವಾಹನವನ್ನು ಜಪ್ತು ಮಾಡಿದ ಬಾಬ್ತು ಯಾವುದೇ ದಾಖಲಾತಿಯನ್ನು ನಾನು ಪಿರ್ಯಾದಿ ಪೋಲೀಸರಿಗೆ ನೀಡಿರುವುದಿಲ್ಲ ಆದರೆ ಉಲ್ಲೇಖಿಸಿದ ಕಛೇರಿಗೆ ನೀಡಿದೆ. ನಾನು ಉಲ್ಲೇಖಿಸಿದ ಸಮಯದಲ್ಲಿ ಮುಖ್ಯ ವಿಚಾರಣೆಯಲ್ಲಿ ನುಡಿದ ಖಾಸಗೀ ಹಣಕಾಸು ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೆ ಎಂಬ ಸಂಗತಿಯನ್ನು ಪುಷ್ಠೀಕರಿಸುವಂತೆ ಪೋಲೀಸರಿಗೆ ದಾಖಲೆಗಳನ್ನು ನಾನು ಖುದ್ದು ನೀಡಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ದಾಖಲೆಯೊಂದರಲ್ಲಿ ನನ್ನ

ರುಜುವನ್ನು ಗುರುತಿಸಿದ್ದು ಸದರಿ ದಾಖಲೆಯನ್ನು ನನ್ನ ಜೊತೆಯಲ್ಲಿದ್ದವರು ಭರ್ತಿ ಮಾಡಿದ್ದರು. ನಾನು ಸದರಿ ದಾಖಲೆಯನ್ನು ಈಗ ಮತ್ತೊಮ್ಮೆ ನೋಡಿದ್ದು ಅದರಲ್ಲಿ 07.07.2014 ರ ನಮೂದು ಇರುತ್ತದೆ. ಸದರಿ ನಮೂದು ವಾಹನವನ್ನು ಜಪ್ತಿ ಮಾಡಿದ ದಿನಾಂಕವನ್ನು ನುಡಿಯುತ್ತದೆ. ನಾನು ಮುಖ್ಯ ವಿಚಾರಣೆಯಲ್ಲಿ ನುಡಿದಂತೆ ದಿನಾಂಕ 14.07.2014 ರಂದು ಉಲ್ಲೇಖಿಸಿದ ವಾಹನವನ್ನು ಜಪ್ತಿ ಮಾಡಿರುವುದಿಲ್ಲ ಬದಲಾಗಿ ದಿನಾಂಕ 07.07.2014 ರಂದು ಜಪ್ತಿ ಮಾಡಿರುತ್ತೇವೆ ಎಂದರೆ ಸರಿ. ನೀವು ಮುಖ್ಯ ವಿಚಾರಣೆಯಲ್ಲಿ ನುಡಿದಂತೆ ಪೋಲೀಸರು ಯಾರನ್ನೂ ಸಹ ನಿಮ್ಮ ಯಾರ್ಡ್ ಬಳಿ ಕರೆತಂದಿಲ್ಲ ಮತ್ತು ನೀವು ಯಾರನ್ನು ಸಹ ನೋಡಿಲ್ಲ ಎಂದರೆ ಪೋಲೀಸರು ಆಸಾಮಿಗಳನ್ನು ಮದ್ದೂರು ಟಿ ವಿ ವೃತ್ತದ ಬಳಿ ಕರೆತಂದು ನನಗೆ ಆಸಾಮಿಗಳನ್ನು ತೋರಿಸಿದರು.

<u>ಪಾಟೀ ಸವಾಲುಃ ಶ್ರೀ ಜಿ ಎಸ್ ಬಿ ವಕೀಲರಿಂದ **5** ನೇ ಆರೋಪಿಯ ಪರವಾಗಿಃ</u>

6. ನಾನು ಈಗ ಪ್ರಶ್ನಿಸಿದಂತೆ ಮುಖ್ಯ ವಿಚಾರಣೆಯಲ್ಲಿ ಉಲ್ಲೇಖಿಸಿದ ವಾಹನವನ್ನು ಜಪ್ತಿ ಮಾಡಬೇಕಾದರೆ ಯಾವುದೇ ಫೋಟೋ ತೆಗೆದಿಲ್ಲ ಮತ್ತು ಮಹಜರ್ ಕ್ರಮ ಜರುಗಿಸಿಲ್ಲ. ಅದೇ ರೀತಿ ರವಿ ಎನ್ನುವವರಿಗೆ ಎಷ್ಟು ಪ್ರಮಾಣದ ಸಾಲದ ಕಂತುಗಳು ಬಾಕಿ ಇವೆ ಎಂಬ ಬಗ್ಗೆ ಲಿಖಿತ ಮಾಹಿತಿಯನ್ನು ಜಪ್ತಿ ಕಾಲಕ್ಕೆ ನೀಡಲಿಲ್ಲ. ನೀವೇನಾದರೂ ಜಪ್ತಿಯ ನಿಖಟ ಪೂರ್ವ ಉಲ್ಲೇಖಿಸಿದ ವಾಹನದ ಮಾಲೀಕರಿಗೆ ಮಾಹಿತಿ ನೀಡಿರುವಿರಾ ಎಂದರೆ ಸಂಸ್ಥೆಯಿಂದ ಅವರಿಗೆ ತಿಳುವಳಿಕೆ ನೀಡಲಾಗಿತ್ತು. ನಾನು ಯಾವುದೇ ವಾಹನವನ್ನು ಜಪ್ತಿ ಮಾಡಿರುವುದಿಲ್ಲ, ನಾನು ಪೋಲೀಸರ ಮಾತಿನ ಮುಲಾಜಿಗೆ ಅಸತ್ಯ ನುಡಿದೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ ಎಸ್‌ವೈ ವಕೀಲರಿಂದ **6** ನೇ ಆರೋಪಿಯ ಪರವಾಗಿಃ</u>

7. ರಾಜು ಎನ್ನುವವರು ಮುಖ್ಯ ವಿಚಾರಣೆಯಲ್ಲಿ ಉಲ್ಲೇಖಿಸಿದ ವಾಹನವನ್ನು ವರ್ಗಾವಣೆ ಪಡೆದಿರುತ್ತಾರೆ ಎಂಬ ಬಗ್ಗೆ ಖಚಿತ ಮಾಹಿತಿ ನನಗೆ ಜಪ್ತಿ ಮಾಡುವ ಕಾಲಕ್ಕೆ ಇರಲಿಲ್ಲ, ಸದರಿ ಮಾಹಿತಿಯನ್ನು ನಂತರ ತಿಳಿದೆ.

(6 ನೇ ಆರೋಪಿಯ ಪರ ವಕೀಲರು ಉಳಿದ ಆರೋಪಿತರ ಪಾಟೀಸವಾಲನ್ನು ಅಳವಡಿಸಿಕೊಂಡಿದ್ದಾರೆ).

ಪಾಟೀ ಸವಾಲುಃ ಶ್ರೀ ಎಮ್ ಬಿ ಎಸ್ ವಕೀಲರಿಂದ **1** ನೇ ಆರೋಪಿಯ ಪರವಾಗಿಃ

8. ನಾನು ಮುಖ್ಯ ವಿಚಾರಣೆಯಲ್ಲಿ ಉಲ್ಲೇಖಿಸಿದ ವಾಹನವನ್ನು ಜಪ್ತಿ ಮಾಡುವ ಕಾಲಕ್ಕೆ ಸದರಿ ವಾಹನ ಯಾರ ಮಾಲೀಕತ್ವದ ವಾಹನ ಎಂಬುದಾಗಿ ಸಂಸ್ಥೆಯವರು ತಿಳಿಸಿದ್ದರು. ವಾಹನವನ್ನು ಜಪ್ತಿ ಮಾಡಬೇಕಾದರೆ ವಿಷಕಂಠಯ್ಯ ಇವರನ್ನು ಜಪ್ತಿಯ ಸಮಯ ಮತ್ತು ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ.

9. ಜಪ್ತಿ ಸಮಯ ಮತ್ತು ಸ್ಥಳದಲ್ಲಿ ಉಲ್ಲೇಖಿಸಿದ ವಾಹನವನ್ನು ರಾಜು ಎಂಬುವವರು ವರ್ಗಾವಣೆ ಪಡೆದಿದ್ದರು ಎಂಬ ಸಂಗತಿ ಜಪ್ತಿಯ ನಂತರ ತಿಳಿಯಿತು. ಉಲ್ಲೇಖಿಸಿದ ವಾಹನ ವಿಷಕಂಠ ರವರ ಮಾಲೀಕತ್ವದ ವಾಹನವಾಗಿದ್ದು ಸದರಿ ವಾಹನಕ್ಕೂ ರಾಜುರವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಮಾತಿನಂತೆ ಸಾಕ್ಷಿ ನುಡಿದೆ ಎಂದರೆ ಸರಿಯಲ್ಲ.

(1 ನೇ ಆರೋಪಿಯ ಪರ ವಕೀಲರು ಉಳಿದ ಆರೋಪಿತರ ಪಾಟೀಸವಾಲನ್ನು ಅಳವಡಿಸಿಕೊಂಡಿದ್ದಾರೆ).

ಮರು ವಿಚಾರಣೆ ಇಲ್ಲ.

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಓ. ಹೇ. ಕೇ. ಸ. ಒ.

(ಸಿದ್ದಲಿಂಗ ಪ್ರಭು)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.